'ಟೈರ್ ಮಾರ್ಕ್ಸ್, ಫುಟ್ ಪ್ರಿಂಟ್ಸ್, ಅಪ್ರೋಚ್ ಶಾಟ್, ಎಕ್ಸ್ಟೀರಿಯರ್ ಎಲ್ಲಾ ಫುಲ್ ಕವರ್ ಮಾಡಿದ್ದೀರ ಅಲ್ವೇ?'

'ಯೆಸ್ ಸಾರ್.'

'ಗೊತ್ತಲ್ಲ... ನೀವು ತೆಗಿಯೊ ಫೋಟೋಸ್ ಕೋರ್ಟ್‌ನಲ್ಲಿ ಗಟ್ಟಿ ಸಾಕ್ಷಿಯಾಗಿ ನಿಲ್ಲಬೇಕಾಗುತ್ತೆ. ಬಾಡಿ ಇರೋ ಲಿವಿಂಗ್ ರೂಮ್, ಬಾಡಿ ಪೊಸಿಷನ್, ಡೈರೆಕ್ಷನ್, ಸುತ್ತಲೂ ಇರೋ ಎಲ್ಲಾ ವಸ್ತುಗಳು, ಇಂಜುರಿ ಮಾರ್ಕ್ಸ್, ಬ್ಲಡ್ ಸ್ಪಾಟ್ಲರ್, ಆಮೇಲೆ ಎಲ್ಲಾ ಕ್ಲೋಸಪ್ ಶಾಟ್ಸ್, ಕ್ರೈಮ್ ಸೀನ್ ವಾಕ್ ತ್ರೂ ವಿಡಿಯೊ ಒಂದೂ ಮಿಸ್ ಮಾಡ್ಬಾರ್ದು.'

'ಯೆಸ್ ಸಾರ್.'

'ಆಮೇಲೆ ಮೇಕ್ ನೋಟ್ಸ್ ಫಾರ್ ಎವೆರಿ ಫೋಟೊ.'

'ಯೆಸ್ ಸಾರ್.'

'ಆ ಬೆರಳಚ್ಚು ತಜ್ಞರನ್ನ ಕರೀರಿ.'

ದೊಡ್ಡ ಹೆಜ್ಜೆ ಹಾಕುತ್ತಾ ಎದುರು ಬಂದು ನಿಂತ ಮಧ್ಯವಯಸ್ಸಿನ ವ್ಯಕ್ತಿಯ ಕುರಿತು,

'ನೀವು ಗೊತ್ತು... ರಮಣ ಅಲ್ವಾ?'

'ಯೆಸ್ ಸಾರ್.'

'ರಮಣ ಅವರೇ ಒಂದು ಪ್ರಶ್ನೆ. ಫಿಂಗರ್ ಪ್ರಿಂಟ್‌ಗೆ, ಮ್ಯಾನುಫ್ಯಾಕ್ಚರಿಂಗ್ ಡೇಟು ಮತ್ತು ಎಕ್ಸ್‌ಪೈರಿ ಡೇಟ್ ಅಂತ ಇರುತ್ತಾ?'

'ಅರ್ಥ ಆಗಲಿಲ್ಲ ಸಾರ್.'

'ಬೆರಳಚ್ಚು ಯಾವಾಗ ಬಿತ್ತು? ಎಷ್ಟು ದಿನದ ತನಕ ಹಾಗೇ ಇರುತ್ತೆ ಅಂತ?'

'ಒಂದು ಸರ್ಫೇಸ್ ಮೇಲೆ ಬೆರಳಚ್ಚು ಯಾವಾಗ ಬಿತ್ತು ಅಂತ ಹೇಳೋದಕ್ಕೆ ಬರೋದಿಲ್ಲ ಸಾರ್. ಆದರೆ ತುಂಬಾ ದಿನದ ನಂತರವೂ ಫಿಂಗರ್ ಪ್ರಿಂಟ್ ಲಿಫ್ಟ್ ಮಾಡುವಷ್ಟು ಟೆಕ್ನಾಲಜಿ ಇಂಪ್ರೂವ್ ಆಗಿದೆ ಸಾರ್.'

'ಆದ್ದರಿಂದ ನನ್ನ ಸಲಹೆ ಏನು ಅಂದ್ರೆ, ಲ್ಯಾಟೆಂಟ್ ಫಿಂಗರ್ ಪ್ರಿಂಟ್ ಜೊತೆಗೆ ಆದಷ್ಟು ಪೇಟೆಂಟ್ ಫಿಂಗರ್ ಪ್ರಿಂಟ್‌ನ ಹುಡುಕಿ ತೆಗೀರಿ ಅಂತ.'

ಬೆರಳಚ್ಚು ತಜ್ಞ ಅರ್ಥವಾದಂತೆ ತಲೆಯಾಡಿಸಿ ನಿಂತ. ಆದರೆ ವಿನಯ್‌ಗೆ ಇದು ಸ್ವಲ್ಪ ಗೊಂದಲ ಮಾಡಿತ್ತು.

'ನನಗೂ ಹೇಳಿ ಸಾರ್... ಅರ್ಥ ಆಗಲಿಲ್ಲ.'

'ರಕ್ತ, ಆಯಿಲ್, ಮಸಿ, ಗ್ರೀಸ್ ಇತ್ಯಾದಿಗಳಿಗೆ ತಾಕಿದ ಬೆರಳು, ಬೇರೆ ಸರ್ಫೇಸ್ ಮೇಲೆ ಕಾಂಟಾಕ್ಟ್ ಆದಾಗ, ಬಿಡೋ ಗುರುತಿಗೆ ಪೇಟೆಂಟ್ ಫಿಂಗರ್ ಪ್ರಿಂಟ್ ಅಂತಾರೆ ವಿನಯ್. ಇದು ಬರಿಗಣ್ಣಿಗೂ ಸ್ಪಷ್ಟವಾಗಿ ಕಾಣುತ್ತೆ. ಇಲ್ಲಿ ಈಗ ಯಾವುದಾದರು ರಕ್ತ ತಾಕಿದ ಫಿಂಗರ್ ಪ್ರಿಂಟ್ ಸಿಕ್ಕರೆ ಆ ವ್ಯಕ್ತೀನ ಈ ಕ್ರೈಮ್‌ಗೆ ಲಿಂಕ್ ಮಾಡಬಹುದು.'

'ಎಲ್ಲಾನು ಅದೇ ತರ ಅಲ್ವಾ ಸಾರ್.'

'ನೋ ವಿನಯ್, ಬೇರೆ ಏನೂ ತಾಕದೆ, ಕೇವಲ ನಮ್ಮ ಬೆರಳುಗಳಿಂದ ಸ್ರವಿಸುವ ದ್ರವಗಳಿಂದಲೂ ಕೂಡ ಬೆರಳಚ್ಚು ಮೂಡುತ್ತೆ. ಅದಕ್ಕೆ ಲ್ಯಾಟೆಂಟ್ ಫಿಂಗರ್ ಪ್ರಿಂಟ್ ಅಂತಾರೆ. ಆ ತರದ ಫಿಂಗರ್ ಪ್ರಿಂಟ್ಸ್, ಸರ್ಫೇಸ್‌ನಿಂದ ಲಿಫ್ಟ್ ಮಾಡೋದಕ್ಕೆ, ಭೂತಗನ್ನಡಿ, ಫಿಂಗರ್ ಪ್ರಿಂಟ್ ಪೌಡರ್ರೂ, ಬ್ರಷೂ, ಲಿಫ್ಟಿಂಗ್ ಟೇಪೂ ಅದೆಲ್ಲಾ ಬೇಕು. ಅದ್ಸರಿ ಇವರ್ಯಾರು?'

'ನನ್ನ ಅಸಿಸ್ಟೆಂಟ್. ಬಾಬು ಅಂತ ಸಾರ್.'

ರಮಣ ತನ್ನ ಸಹಾಯಕನನ್ನು ಪರಿಚಯಿಸಿದ.

'ಓಕೆ, ಆಲ್‌ರೈಟ್. ಎಲ್ಲಾ ಬಯೋಮೆಟ್ರಿಕ್ ಎವಿಡೆನ್ಸ್ ಜೊತೆಗೆ ಫೈಬರ್ ಎವಿಡೆನ್ಸ್ ಕೂಡ ನೀವೇ ಕಲೆಕ್ಟ್ ಮಾಡ್ತೀರ ಅಲ್ವಾ ರಮಣ?'

'ಯೆಸ್ ಸಾರ್.'

'ಸಾರ್, ಈ ಫೈಬರ್ ಎವಿಡೆನ್ಸ್?'

ಮತ್ತೆ ವಿನಯ್‌ನ ಪ್ರಶ್ನೆ.

'ಇದು ಟ್ಯೂಷನ್ ಕ್ಲಾಸ್ ಏನ್ರೀ. ಎನಿ ವೇ ನೀವು ಒಂದು ಸೋಫಾ ಮೇಲೆ ಕೂತ್ರೀ ಅನ್ನೀ, ನಿಮ್ಮ ಪ್ಯಾಂಟಿನ ಬಟ್ಟೆಯ ಸಣ್ಣ ಎಳೆಗಳು ಸೋಫಾದ ಮೇಲೆ, ಮತ್ತೆ ಆ ಸೋಫಾದ ಫಾಬ್ರಿಕ್‌ನ ಸಣ್ಣ ಎಳೆಗಳು ನಿಮ್ಮ ಪ್ಯಾಂಟಿನ ಬಟ್ಟೆಯ ಮೇಲೆ, ವಿನಿಮಯ ಆಗುತ್ತೆ. ಇದು ಪರಸ್ಪರ ಸಂಪರ್ಕಕ್ಕೆ ಬರುವ ಯಾವುದೇ ಎರಡು ಹೊರಮೈಗಳ ನಡುವೆ ಆಗುತ್ತೆ. ಆಗ ಆ ಎಳೆಗಳು ಅಥವಾ ಫೈಬರ್ಸ್, ಇಲ್ಲಿ ಇಂಥಾವ್ರಿದ್ರೂ ಅಂತ ಪುರಾವೆ ಆಗುತ್ತೆ.'

'ಆಯ್ತು, ಡಾಗ್ ಹ್ಯಾಂಡ್ಲರ್‌ನ ಕರೀರಿ ವಿನಯ್.'

'ಹಲೋ ಸಾರ್, ನಾನು ಸಂಜೀವಪ್ಪ.'

'ಅಲ್ಲಿ ಕ್ರೈಮ್ ಸ್ಪಾಟ್‌ನಲ್ಲಿ ನೀವೂ, ನಿಮ್ಮ ನಾಯಿ ಜಾಸ್ತಿ ಡಿಸ್ಟರ್ಬ್ ಮಾಡೋದು ಬೇಡ. ಜಸ್ಟ್ ಎಷ್ಟು ಸೆಂಟ್ ಸ್ನಿಫ್ ಮಾಡುಸ್ಬೇಕೋ ಅಷ್ಟು ಮಾಡ್ಸಿ. ಕ್ರಿಮಿನಲ್‌ನ ಟ್ರ್ಯಾಕ್ ಮಾಡುದ್ರೇ ಗುಡ್. ಕೊನೆಪಕ್ಷ ಮರ್ಡರ್ ವೆಪನ್ ಆದ್ರೂ ಟ್ರ್ಯಾಕ್ ಆಗ್ಬೇಕು.'

'ಯೆಸ್ ಸಾರ್.'

'ವಿನಯ್ ಇನ್ನು ನೀವು... ಕಮಲಮ್ಮ ಕೊಲೆ ನೋಡಿ ನಿಮಗೆ ಹೇಳಿದ್ದು ಹನ್ನೊಂದು ಗಂಟೆ ಐದು ನಿಮಿಷಕ್ಕೆ. ಆ ಟೈಮ್‌ನಿಂದ ಹಿಂದಕ್ಕೆ ಮತ್ತು ಮುಂದಕ್ಕೆ, ಪ್ರತಿಯೊಂದು ಚಟುವಟಿಕೆ ಅಥವಾ ಘಟನೇನೂ, ಅದು ನಡೆದ ಸ್ಥಳ, ಸಮಯ ಮತ್ತು ದಿನಾಂಕ, ಅದರಲ್ಲಿ ಭಾಗಿಯಾದ ವ್ಯಕ್ತಿಗಳು... ಒಂದು ಪಟ್ಟಿ ಅಥವಾ ರೆಕಾರ್ಡ್ ಮಾಡ್ತಾ ಹೋಗಿ... ಅಂದರೆ ಒಂದು ಟೈಮ್ ಲೈನ್ ರೆಡಿ ಮಾಡಿ ಅಂತಾ.'

'ಯೆಸ್ ಸಾರ್... ಸಾರ್ ಆಮೇಲೆ ಬ್ಲಡ್ ಸ್ಪಾಟ್ಲರ್ ಅನಲಿಸ್ಟ್ ಬೇರೆ ಕೇಸ್ ಮೇಲಿದ್ದಾರಂತೆ, ಸಾಯಂಕಾಲ ಬರ್ತಾರಂತೆ, ಪರ್ವಾಗಿಲ್ವಾ ಸಾರ್.'

'ನೋ ಪ್ರಾಬ್ಲಂ ವಿನಯ್... ಹಾಗೇ ನಿಮ್ಮ ನೋಟ್ ಪ್ಯಾಡ್ ಮತ್ತು ಪೆನ್ನು ಯಾವಾಗಲೂ ರೆಡಿ ಇರಲಿ. ಈಗ ಸದ್ಯಕ್ಕೆ ಇಲ್ಲಿ ತನಿಖೆಗೆ ಬಂದಿರೊವರನ್ನ ಪಟ್ಟಿ ಮಾಡಿ.'

'ಯೆಸ್ ಸಾರ್.'

ಎಲ್ಲರನ್ನೂ ಉದ್ದೇಶಿಸಿ–

'ಈಗ ಕ್ರೈಮ್ ಸ್ಪಾಟ್‌ಗೆ ಹೋಗಬಹುದೇನೋ. ಆಲ್ ದಿ ಬೆಸ್ಟ್ ಎವೆರಿಬಡಿ. ಸಾಕ್ಷಿ ಪುರಾವೆಗಳು ಸ್ವಲ್ಪವೂ ಡಿಸ್ಟರ್ಬ್ ಆಗದಂತೆ ಸೂಕ್ಷ್ಮವಾಗಿ ಗಮನಿಸಿ ಸಂಗ್ರಹಿಸ್ಬೇಕು. ಸಾಕ್ಷಿ ಪುರಾವೆಗಳನ್ನ ಸಂಗ್ರಹಿಸೋದಕ್ಕೆ, ಲೇಬಲಿಂಗ್, ಪ್ಯಾಕೇಜಿಂಗ್ ಮತ್ತು ಟ್ಯಾಂಪರ್ ಪ್ರೂಫ್ ಸೀಲ್ ಮಾಡೋದಕ್ಕೆ, ವಿವರಗಳನ್ನು ಎಂಟರ್ ಮಾಡೋದಕ್ಕೆ ಒಂದು ವಿಧಿವಿಧಾನ, ಕ್ರಮ ಇದೆ ಅಂತ ನಿಮಗೆಲ್ಲಾ ಗೊತ್ತಿರಬಹುದು... ಆ ಕ್ರೈಮ್ ಸೀನ್ ಇನ್ವೆಸ್ಟಿಗೇಷನ್ ಪ್ರೋಟೊಕಾಲ್ ಏನಾದ್ರು ಉಲ್ಲಂಘನೆ ಆದರೆ, ಕೋರ್ಟ್, ಅಂತಹ ಸಾಕ್ಷಿ ಪುರಾವೆಗಳನ್ನ ಒಪ್ಪೋದಿಲ್ಲ. ನಿಮ್ಮ ಕೆಲಸವೆಲ್ಲಾ ವ್ಯರ್ಥ ಆಗುತ್ತೆ. ಇಟ್ ವಿಲ್ ಬಿ ಎ ಬ್ಯಾಡ್ ರಿಮಾರ್ಕ್ ಆನ್ ಯು. ಇನ್ನೊಂದು ವಿಷಯ, ಒಳಗಡೆ ಕ್ರೈಮ್ ಸೀನ್ ಬಾಳ ಡಿಸ್ಟರ್ಬಿಂಗ್ ಆಗಿರುತ್ತೆ. ಅದಕ್ಕೆ ಸಿದ್ಧವಾಗಿರಿ.'

ಮಾಯಣ್ಣನ ಇಷ್ಟೆಲ್ಲಾ ಪೂರ್ವಭಾವಿ ಸೂಚನೆ, ಸಲಹೆಯ ಮಾತುಕತೆಗಳಿಂದ, ತಮ್ಮ ಕರ್ತವ್ಯ ವ್ಯಾಪ್ತಿ ಮತ್ತು ಇತಿಮಿತಿಗಳ ಸೂಕ್ಷ್ಮ ಅರಿವಿನ ಒಂದು ಕ್ರೈಮ್ ಇನ್ವೆಸ್ಟಿಗೇಷನ್ ಟೀಮ್ ಸಿದ್ಧವಾಗಿತ್ತು.

ನಿರೀಕ್ಷಿಸಿದಂತೆ ಬಾಗಿಲು ದೂಡಿ ಒಳಹೊಕ್ಕಿದಾಗ ಕಂಡ ದೃಶ್ಯದಿಂದ ಗರಬಡಿದಂತೆ ಸ್ತಂಭೀಭೂತವಾಗಿತ್ತು ಇಡೀ ತನಿಖಾ ತಂಡ.

'ಮೊದಲು, ನಾನು ಮತ್ತು ವಿನಯ್, ಫೋಟೊಗ್ರಾಫರ್ ರಾಜೀವ್ ಜೊತೆಗೆ ಒಳಗೋಗಿ ಫೋಟೊ ಕೆಲಸ ಮುಗಿಸಿ ಬರ್ತೀವಿ. ನಂತರ ನಮ್ಮ ಜೊತೆ, ರಮಣ ಮತ್ತು ಅವರ ಅಸಿಸ್ಟೆಂಟ್ ಬಂದು ಎಲ್ಲಾ ಬಯೋಮೆಟ್ರಿಕ್ ಎವಿಡೆನ್ಸ್ ಅಂದ್ರೆ, ಫಿಂಗರ್ ಪ್ರಿಂಟ್, ಫುಟ್ ಪ್ರಿಂಟ್, ಪಾಮ್ ಪ್ರಿಂಟ್, ಬ್ಲಡ್, ಸಲೈವಾ, ಕೂದಲು ಮತ್ತು ಇತರೇ ಸ್ಯಾಂಪಲ್ಸ್... ಇವೆಲ್ಲಾ ಗುರುತಿಸಿ ಮಾರ್ಕ್ ಮಾಡಿ, ಕಲೆಕ್ಟ್ ಮಾಡಲಿ, ಆಮೇಲೆ ನಮ್ಮ ಜೊತೆ ಸಂಜೀವಪ್ಪ ಅವರು ಸ್ನಿಫ್ಫರ್ ಡಾಗ್‌ನ ಒಳಗೆ ಬಿಟ್ಟು ಸ್ನಿಫ್ ಮಾಡ್ಸಿ, ಟ್ರ್ಯಾಕ್ ಮಾಡಲು ಹೊರಡಲಿ. ಅದೇ ಕ್ರಮದಲ್ಲಿ ಕೊನೇಲಿ, ಮತ್ತೆ ಎಲ್ಲಾ ಒಟ್ಟಿಗೇ ಒಳಹೋಗಿ ಈ ಪ್ರಾಥಮಿಕ ತನಿಖೆ ಮುಗಿಸೋಣ. ಐ ಹೋಪ್ ಐ ಹ್ಯಾವ್ ಮೇಡ್ ಇಟ್ ಕ್ಲಿಯರ್ ಟು ಎವೆರಿವನ್.'

ಅರ್ಥವಾದಂತೆ ಎಲ್ಲರೂ ತಲೆಯಾಡಿಸಿದರು.

ಫೋಟೊಗ್ರಫಿ ಪರಿಪೂರ್ಣವಾಗಿ ಮುಗಿದಿತ್ತು. ಬಯೋಮೆಟ್ರಿಕ್ ಮತ್ತು ಇತರೇ ಎವಿಡೆನ್ಸ್ ಕಲೆಕ್ಷನ್, ಲೇಬಲಿಂಗ್, ಪ್ಯಾಕೇಜಿಂಗ್, ನೋಟ್ಸ್ ಮೇಕಿಂಗ್ ಕೂಡ ಸಾಂಗವಾಗಿ ಮುಗಿದಿತ್ತು. ಆದರೆ ಸ್ನಿಫರ್ ಡಾಗ್ ಮಾತ್ರ ಅಪರಾಧಿ ಅಥವಾ ಅಪರಾಧಕ್ಕೆ ಬಳಸಿದ ಆಯುಧದ ಜಾಡನ್ನು ಹಿಡಿಯುವಲ್ಲಿ ಸೋತಿತ್ತು. ರಸ್ತೆಯ ತಿರುವಿನ ತನಕ ಹೋಗಿ ದಿಕ್ಕು ತಪ್ಪಿದಂತೆ ನಾಲ್ಕೈದು ಗಿರಕಿ ಹೊಡೆದು ಸುಮ್ಮನೆ ನಿಂತುಬಿಟ್ಟಿತ್ತು. ಮಾಯಣ್ಣನಿಗೆ ಅದು ನಿರೀಕ್ಷಿತವೇ ಆಗಿತ್ತು. ಏಕೆಂದರೆ ಸಾಮಾನ್ಯವಾಗಿ ನೆಲಬಿಟ್ಟು ಗಾಡಿಯಲ್ಲಿ ಕುಳಿತುಹೋದರೆ ವಾಸನೆಯ ಆ ಜಾಡಿನ ನಿರಂತರತೆ ಇರೋದಿಲ್ಲ.

'ಓಕೆ ಟೀಮ್... ನೀವೆಲ್ಲಾ ಇಲ್ಲೇ ಕೆಳಗೆ ಹೋಗಿ ಸ್ವಲ್ಪ ಬಿಡುವು ತಗೊಳ್ಳಿ. ಮತ್ತೆ ಬೇಕಾಗಬಹುದು ಕರೀತೀನಿ. ವಿನಯ್ ನೀವಿರಿ.'

ಅಮ್ಮು ಮನೆಯಲ್ಲಿ ಕಂಪ್ಯೂಟರ್ ಆಗಲಿ ಲ್ಯಾಪ್‌ಟಾಪ್ ಆಗಲಿ ಇರಲಿಲ್ಲ, ಮೊಬೈಲ್ ಫೋನ್ ಕಾಣೆಯಾಗಿತ್ತು. ಅಮ್ಮು ಆಗ ತಾನೇ ಸ್ನಾನ ಮುಗಿಸಿಬಂದು, ಬಹುಶಃ ಎಲ್ಲಿಗೋ ಹೊರಡಲು ರೆಡಿಯಾಗುತ್ತಿದ್ದಂತೆಯೇ ಕೊಲೆಯಾಗಿದ್ದಳು.